ವಿಚಾರ ಲಹರಿ

# ಕನ್ನಡ ದೀಪಕ್ಕೆ ಒಂದಿಷ್ಟು ಎಣ್ಣೆ

'ಮನೆ ಮನೆಗಳಲ್ಲಿ, ಮನ ಮನಗಳಲ್ಲಿ ಹಚ್ಚೇವು ಕನ್ನಡದ ದೀಪ' ಎಂಬುದು ಕವಿ ಡಿ.ಎಸ್. ಕರ್ಕಿಯವರ ಪ್ರಖ್ಯಾತ ಕವಿತೆಯೊಂದರ ಸಾಲು. ಪ್ರತಿ ವರ್ಷ ನವೆಂಬರ್ ತಿಂಗಳು ಬಂದೊಡನೇ ಈ ಸಾಲು ಕನ್ನಡನಾಡಿನ ಮೂಲೆ ಮೂಲೆಗಳಲ್ಲಿ ಮೊಳಗುತ್ತದೆ; ತಿಂಗಳು ಮುಗಿಯುತ್ತಾ ಬಂದಂತೆ ಅದರ ತೀವ್ರತೆ ನಿಧಾನವಾಗಿ ಕ್ಷೀಣಿಸುತ್ತಾ ಒಂದು ದಿನ ಸ್ತಬ್ಧವಾಗುತ್ತದೆ. ಮತ್ತೆ ಅದು ಕೇಳಿಬರುವುದು ಮುಂದಿನ ನವೆಂಬರ್‌ನಲ್ಲೇ! ಇದು ಕನ್ನಡಿಗರ ಭಾಷಾಭಿಮಾನದ ಅಳತೆಗೋಲು ಎಂದರೆ ತಪ್ಪಾಗಲಾರದು.

ಕನ್ನಡದ ದೀಪ ಸದಾ ಉರಿಯುತ್ತಿರಬೇಕೆಂಬುದು ಪ್ರಸ್ತುತ ಕಾಲಘಟ್ಟದಲ್ಲಿ ಒಂದು ಆದರ್ಶ. ಅದನ್ನು ಕಾರ್ಯಗತ ಗೊಳಿಸಬೇಕಾದರೆ ಭಾವಾವೇಶ ಮಾತ್ರ ಸಾಕಾಗದು; ಪ್ರಜ್ಞಾಪೂರ್ವಕ ಪ್ರಯತ್ನವೂ ಬೇಕು. ಕನ್ನಡದ ದೀಪದ ಜ್ವಲನ ಶಕ್ತಿ ನಿರಂತರವಾಗಿ ಉಳಿಯಬೇಕಾದರೆ, ಆ ದೀಪಕ್ಕೆ ಕನ್ನಡಿಗರು ಭಾವನಾತ್ಮಕವಾದ ಹಾಗೂ ಬೌದ್ಧಿಕವಾದ ಎಣ್ಣೆಯನ್ನು ಒದಗಿಸುತ್ತಲೇ ಇರಬೇಕು. ಈ ಕೆಲಸ ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ– ಎರಡೂ ಹಂತಗಳಲ್ಲಿ– ನಡೆಯಬೇಕಾದುದು, ಪ್ರಸಕ್ತ ನಮ್ಮ ಶಿಕ್ಷಣ ಕ್ಷೇತ್ರವಂತೂ ಕನ್ನಡವನ್ನು ಅಕ್ಷರಶಃ ಬದಿಗೊತ್ತಿ, ಇಂಗ್ಲಿಷ್ ಭಾಷೆಗೇ ಮಹತ್ವ ನೀಡುತ್ತಿದೆ. ಇದರಿಂದಾಗಿ ಕನ್ನಡದ ಅಭಿವ್ಯಕ್ತಿ ಸಾಮರ್ಥ್ಯ ಕಮರಿಹೋಗುತ್ತಿದೆ; ಕನ್ನಡ ಭಾಷೆಯ ಬೌದ್ಧಿಕ ಆಯಾಮ ಕುಂಠಿತಗೊಳ್ಳುತ್ತಿದೆ. ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಮಾಧ್ಯಮವಾಗಿರುವ ಇಂಗ್ಲಿಷ್ ಕೇವಲ ಶಿಕ್ಷಣ ಮಾಧ್ಯಮವಾಗಿ ಮಾತ್ರ ಉಳಿದಿಲ್ಲ; ವಿದ್ಯಾರ್ಥಿಗಳು ತಮ್ಮ ಅಂತರಂಗದ ಮಾತುಗಳನ್ನು ಪರಸ್ಪರ ಹಂಚಿಕೊಳ್ಳುವಾಗಲೂ ಮಾತೃಭಾಷೆಯನ್ನು ಬಳಸುತ್ತಿಲ್ಲ, ಹೀಗಾಗಿ ಖಾಸಗಿ ವಲಯದಲ್ಲಿ ಸಂವಹನ ಮಾಧ್ಯಮವಾಗಿಯೂ ಇಂಗ್ಲಿಷ್ ವಿಜೃಂಭಿಸುತ್ತಿದೆ, ನಗರ ಪ್ರದೇಶಗಳಲ್ಲಂತೂ ಅಡುಗೆ ಮನೆಗಳಿಗೂ ಇಂಗ್ಲಿಷ್ ಆಕ್ರಮಿಸಿಕೊಂಡಿದೆ. ಹೀಗಾಗಿ ನಮ್ಮ ಎಳೆಯರಿಗೆ ಸೊಪ್ಪು, ತರಕಾರಿ, ಗೆಡ್ಡೆ, ಹಣ್ಣುಗಳು ಕನ್ನಡದಲ್ಲಿ ಕಣ್ಮರೆಯಾಗಿ, ಇಂಗ್ಲಿಷ್‌ನಲ್ಲಿ ಕಾಣಿಸಿಕೊಳ್ಳುತ್ತಿವೆ. ಕನ್ನಡದ ಮಗುವಿಗೆ ಸಂಬಂಧ ಸೂಚಕ ಪದಗಳನ್ನೂ, ಸಂಖ್ಯಾ ವಾಚಕ ಶಬ್ದಗಳನ್ನೂ (ಅಪ್ಪ, ಅಮ್ಮ... ಒಂದು, ಎರಡು ಇತ್ಯಾದಿ) ಕನ್ನಡದಲ್ಲಿ ಹೇಳಿದರೆ ಅರ್ಥವಾಗುವುದಿಲ್ಲ ಎನ್ನುವ ಪರಿಸ್ಥಿತಿ ಪ್ರಾಪ್ತವಾಗಿದೆ. ಹೀಗಾಗಿ ಪೀಳಿಗೆಯಿಂದ ಪೀಳಿಗೆಗೆ ಕನ್ನಡ ಭಾಷೆ ಅವಸಾನದ ದಿಕ್ಕಿನಲ್ಲಿ ಚಲಿಸುತ್ತಿದೆ.

ಒಂದು ಭಾಷೆಯ ಸಾವು ಎಂದರೆ ಒಂದು ಪರಂಪರೆಯ ಸಾವು; ಒಂದು ಸಂಸ್ಕೃತಿಯ ಸಾವು. ಎಲ್ಲ ಭಾಷೆಗಳೂ ಅನಿವಾರ್ಯವಾಗಿ ಸ್ಥಿತ್ಯಂತರಕ್ಕೊಳಗಾಗಲೇಬೇಕು. ಬೇರೆ ಭಾಷೆಗಳ ಸಂಪರ್ಕ, ಪ್ರಭಾವ, ಬಳಕೆಗಳಿಂದಾಗಿ ಒಂದು ನಿರ್ದಿಷ್ಟ ಭಾಷೆ ತನ್ನ ಸಂವಹನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತದೆ. ಆದರೆ ಈ ಪ್ರಕ್ರಿಯೆಯಲ್ಲಿ ಅನ್ಯಭಾಷೆಗಳು ಬದನಿಕೆಯಂತಾಗಿ ಮಾತೃಭಾಷೆಯನ್ನು ಕೊಲ್ಲಬಾರದಲ್ಲವೆ? ಕನ್ನಡದ ಸಂದರ್ಭದಲ್ಲಿ ಹೀಗೇ ಆಗುತ್ತಿದೆ. ಇಂಗ್ಲಿಷ್ ಭಾಷೆಯನ್ನು ನಾವು ವೇಗ ವರ್ಧಕದಂತೆಯೇ, ಶಕ್ತಿ ವರ್ಧಕದಂತೆಯೇ ಬಳಸಿಕೊಳ್ಳಬೇಕಾಗಿದೆ. ಅದು ಕನ್ನಡದ ಪಾಲಿಗೆ ಟಾನಿಕ್ ಆಗಬೇಕೇ ಹೊರತು ವಿಷಯವಾಗಬಾರದು, ಒಂದು ಭಾಷೆ ಸಶಕ್ತವಾಗಿ ಉಳಿದು ಬೆಳೆಯಬೇಕಾದರೆ, ಅದು ಸಮಕಾಲೀನ ಅಗತ್ಯಗಳನ್ನು ಧಾರಣೆ ಮಾಡಿಕೊಳ್ಳುವಷ್ಟು ಪ್ರಬುದ್ಧವಾಗಿರಬೇಕು. ಹೀಗಾಗಿ ಇಂಗ್ಲಿಷ್ ಭಾಷೆಯ ಮೂಲಕ ಕನ್ನಡ ಆ ರೀತಿಯ ಧಾರಣಾಶಕ್ತಿಯನ್ನು ಆವಾಹನೆ ಮಾಡಿಕೊಳ್ಳಬೇಕು. ಆಧುನಿಕ ಜಗತ್ತಿನ ವಿವಿಧ ಜ್ಞಾನಶಾಖೆಗಳ ಅಭಿವ್ಯಕ್ತಿ ಕನ್ನಡದಲ್ಲಿ ಸಾಧ್ಯವಾಗುವಂತಹ ಸ್ಥಿತಿಯನ್ನು ದೊರಕಿಸಿಕೊಳ್ಳಲು ಕನ್ನಡದ ಪ್ರಜ್ಞಾವಂತರು ಶ್ರಮಿಸಬೇಕು. ತನ್ನ ಪ್ರಾಚೀನ ಸಂಪತ್ತನ್ನು ಉಳಿಸಿಕೊಂಡು, ಹೊಸತನ್ನು ಗಳಿಸಿಕೊಂಡು ಬೆಳೆಯಬೇಕಾದ ಅನಿವಾರ್ಯತೆ ಕನ್ನಡಕ್ಕಿದೆ. ನಮ್ಮ ಪರಂಪರೆ, ಸಂಸ್ಕೃತಿ, ಸಾಹಿತ್ಯಗಳ ಬಗೆಗೆ ನಿರ್ದಿಷ್ಟ ಪಠ್ಯಕ್ರಮವನ್ನು ರೂಪಿಸಿಕೊಂಡು, ಕನ್ನಡದ ಮಕ್ಕಳಿಗೆ ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಿ ತಿಳಿಸಿ ಹೇಳಿದರೆ, ಮುಂದಿನ ಪೀಳಿಗೆ ಕನ್ನಡವನ್ನು ಉಳಿಸಿಕೊಳ್ಳುವ ಆಸಕ್ತಿ ತೋರಿಸಬಹುದು. ಜನಪದ ಗೀತಗಾಯನ, ಸುಗಮ ಸಂಗೀತ, ಗಮಕ, ಹರಿಕಥೆ– ಮುಂತಾದವು ನಮ್ಮ ಸಾಹಿತ್ಯ ಸಂಸ್ಕೃತಿಗಳನ್ನು ಕುರಿತು ಆಸಕ್ತಿಯನ್ನು ಅರಳಿಸುವ ಸೂಕ್ತ ಮಾಧ್ಯಮಗಳು ಎಂಬುದನ್ನು ಮರೆಯಬಾರದು.

ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಸದ್ಯಕ್ಕೆ ಕನ್ನಡ ಜೀವ ಚೈತನ್ಯದ ಸೆಲೆಗಳು ಉಳಿದುಕೊಂಡಿವೆ. ನಮ್ಮ ಗ್ರಾಮೀಣರಿಗೆ ನೂರಾರು ಹೂವು, ಹಣ್ಣು, ಮೃಗ, ಪಕ್ಷಿ, ಸಸ್ಯ ಸಂಕುಲಗಳ ಕನ್ನಡದ ಹೆಸರುಗಳು ನೆನಪಿನಲ್ಲಿವೆ. ಕನ್ನಡ ಗಾದೆಗಳೂ, ಒಗಟುಗಳೂ ಅವರ ಸ್ಮೃತಿಯಲ್ಲಿ ಉಳಿದಿವೆ. ಅವನ್ನು ಜತನವಾಗಿ ಕಾಪಾಡಿಕೊಳ್ಳುವ ಕೆಲಸವೂ ಮಹತ್ವದ್ದು. 'ಇರುವುದನ್ನು ಉಪಯೋಗಿಸಿಕೊಳ್ಳುತ್ತಲೂ, ಇರದುದನ್ನು ಪಡೆದುಕೊಳ್ಳುತ್ತಲೂ ನಮ್ಮ ಭಾಷೆ ಬೆಳೆಯಬೇಕಾಗಿದೆ' ಎನ್ನುತ್ತಾರೆ ಖ್ಯಾತ ಚಿಂತಕ ಕೆ.ವಿ. ತಿರುಮಲೇಶ್. ಒಟ್ಟಿನಲ್ಲಿ ಕನ್ನಡದ ದೀಪ ಪ್ರಖರಗೊಂಡು ಉರಿಯಬೇಕಾದರೆ ಕನ್ನಡಿಗರ ಅಭಿಮಾನ, ಅಭಿರುಚಿ, ಪರಿಶ್ರಮಗಳ ತೈಲವನ್ನು ಒದಗಿಸುತ್ತಲೇ ಇರಬೇಕು!

**–ವೈನತೇಯ**

## ಮಾತೇ ಮುತ್ತು

★ ಎಲ್ಲಿ ಹೆಂಗಸರಿಗೆ ಮಾನ್ಯತೆ ಇದೆಯೋ ಅಲ್ಲಿ ದೇವತೆಗಳು ಸಂತೋಷ ಪಡುತ್ತಾರೆ. ಎಲ್ಲಿ ಅವರಿಗೆ ಮನ್ನಣೆ ಇಲ್ಲವೋ ಅಲ್ಲಿ ಎಲ್ಲಾ ಕೆಲಸಗಳೂ ವ್ಯರ್ಥ.

–ಮನುಸ್ಮೃತಿ

★ ಯಾವನು ಒಳ್ಳೆಯ ಗುಣಗಳ ಬೆಲೆಯನ್ನು ತಿಳಿಯಲಾರನೋ ಅಂಥವನನ್ನು ಪಂಡಿತನು ಆಶ್ರಯಿಸಬಾರದು.

–ಸುಭಾಷಿತ

★ ಉಪದೇಶ ಮಾಡುವುದರಿಂದ ಒಬ್ಬನ ಸ್ವಭಾವವನ್ನು ಬದಲಾಯಿಸುವುದು ಸಾಧ್ಯವಿಲ್ಲ. ನೀರನ್ನು ಚೆನ್ನಾಗಿ ಕುದಿಸಿದರೂ ಮತ್ತೆ ತಣ್ಣಗೇ ಆಗುತ್ತದೆ.

–ಪಂಚತಂತ್ರ

★ ಮೊದಲು ವಿಷದ ಹಾಗೆ, ಕಡೆಯಲ್ಲಿ ಅಮೃತದ ಹಾಗೆ ಇದ್ದು– ಬುದ್ಧಿಗೆ ತಿಳಿವನ್ನುಂಟುಮಾಡುವ ಸುಖವೇ ತಾತ್ವಿಕ ಸುಖ.

–ಭಗವದ್ಗೀತೆ

★ ಯಾರು ಮನಸ್ಸು, ಮಾತು, ಕೃತಿಗಳಿಂದ ಕೆಟ್ಟದ್ದನ್ನು ಮಾಡರೋ ಅವರೇ ಮಹಾತ್ಮರಾದ ತಪಸ್ವಿಗಳು. ಶರೀರ ಶೋಷಣೆ ಮಾಡುವವರಲ್ಲ.

–ಮಹಾಭಾರತ

★ ಸದಾ ಕೆಲಸ ಮಾಡುತ್ತಿರುವ, ಯಾವಾಗಲೂ ಬಡತಿ ಇಲ್ಲದವನೇ ಸುಖಪುರುಷ.

–ಸಂತವಾಣಿ

★ ದುಃಖದಲ್ಲಿ ಬೆಂದ ಮನುಷ್ಯನಿಗೆ ಗೆಳೆಯ ಔಷಧಿಯಾಗಬಹುದು.

–ಸಾ.ಶಿ.ಮರುಳಯ್ಯ

★ ಸಂತೋಷ ಹೊರಗಿನಿಂದ ಬರುವುದಿಲ್ಲ. ಅದನ್ನು ನಮ್ಮ ಮನಸ್ಸಿನಲ್ಲೇ ನಾವು ಕಂಡುಕೊಳ್ಳಬೇಕು.

–ಚದುರಂಗ

★ ಸಾವು ಎಷ್ಟೊಂದು ಶಕ್ತಿಶಾಲಿ ಎಂದರೆ ದೊಡ್ಡ ರಕ್ಷಣಾ ಪಡೆ ಸುತ್ತುವರಿದಿದ್ದರೂ ರಾಜನನ್ನು ಅರಮನೆಯಿಂದ ಎತ್ತಿಕೊಂಡು ಹೋಗುತ್ತದೆ. ಯಮನನ್ನು ಯಾರೂ ತಡೆಯಲಾರರು.

–ಕಬೀರ

★ ಅಪರಾಧಿಗಳಲ್ಲಿ ಕ್ಷಮೆ ತೋರುವುದು ಯತಿಗಳಿಗೆ ಭೂಷಣವೇ ವಿನಾ ರಾಜರಿಗಲ್ಲ.

–ಸೋಮದೇವ

★ ಯಾರು ತನ್ನ ಸಹಾಯವನ್ನು ಸ್ವತಃ ಮಾಡಿಕೊಳ್ಳಬಲ್ಲನೋ ಅಂಥವನಿಗೆ ದೇವರ ಸಹಾಯ ಇರುತ್ತದೆ. ಸೋಮಾರಿಗೆ ಸಾಯುವುದರಲ್ಲೇ ಆನಂದವಿದೆ.

–ಮಹಾತ್ಮ ಗಾಂಧೀಜಿ

★ ಸೋಮಾರಿತನ ಮರಣದಂತೆ, ಉದ್ಯೋಗ ಜೀವಸೆಲೆಯಂತೆ.

–ಸ್ವಾಮಿ ರಾಮತೀರ್ಥರು